RNU AIR DHARWAD

**SEPTEMBER 16,2024**
**ALL INDIA RADIO- DHARWAD**
**PRADESH SAMACHARA (KANNADA) 7:05 AM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ವಿವೇಕಾದಿತ್ಯ ಕನಿಯಾಲ**

<><><>

**ಮುಖ್ಯಾಂಶಗಳು:**

- **ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನ; ಪ್ರಜಾಪ್ರಭುತ್ವದಿಂದ ಸಾಮಾಜಿಕ ನ್ಯಾಯ – ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದನೆ.**
- **ಧಾರವಾಡದಿಂದ ಮೂರೂವರೆ ಲಕ್ಷ ಜನ, ಮಾನವ ಸರಪಳಿಗೆ ನೋಂದಣಿ – ಸಚಿವ ಸಂತೋಷ ಲಾಡ್.**
- **ಸಿಂಗಳೀಕಗಳ ಸಂತಾನೋತ್ಪತ್ತಿ ಯೋಜನೆ, ಮೈಸೂರು ಕೂರ್ಗಳ್ಳಿಯ, ವನ್ಯಜೀವಿ ಪುನರ್ವಸತಿ ಕೇಂದ್ರದಲ್ಲಿ, ಯಶಸ್ವಿ.**
- **"ಸ್ವಭಾವ–ಸ್ವಚ್ಛತಾ; ಸಂಸ್ಕಾರ–ಸ್ವಚ್ಛತಾ" ಧ್ಯೇಯದೊಂದಿಗೆ, ನಾಳೆಯಿಂದ ಸ್ವಚ್ಛತೆಯೇ ಸೇವೆ ಪಾಕ್ಷಿಕ, ಆರಂಭ.**

<><><>

**ಈಗ ವಾರ್ತೆಗಳ ವಿವರ**

<><><>

**ಆರ್ಥಿಕ, ಸಾಮಾಜಿಕ ಸಮಾನತೆಯನ್ನು ಒಳಗೊಂಡ ಪ್ರಜಾಪ್ರಭುತ್ವ ದೊರೆತಾಗ ಮಾತ್ರ, ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥ ಬರುತ್ತದೆ. ದೇಶದಲ್ಲಿ ತಾರತಮ್ಯ ನೀತಿ ಇರುವ ವರೆಗೂ ರಾಜಕೀಯ ಸ್ವಾತಂತ್ರಕ್ಕೆ ಅರ್ಥವಿಲ್ಲ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.**

**'ನಾಗರಿಕ ಸಹಭಾಗಿತ್ವ ಮತ್ತು ಆಡಳಿತದಲ್ಲಿ, ಕೃತಕ ಬುದ್ಧಿಮತ್ತೆಯ ಮಾರ್ಗ' ಎಂಬ ಧ್ಯೇಯದಡಿ, ಮಾನವ ಸರಪಳಿ ಮೂಲಕ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಗೆ, ಮುಖ್ಯಮಂತ್ರಿ ಬೆಂಗಳೂರಿನ ವಿಧಾನಸೌಧದ ಎದುರು, ಚಾಲನೆ ನೀಡಿದರು.**

**ಮಹರ್ಷಿ ವಾಲ್ಮೀಕಿ, ಬಾಬು ಜಗಜೀವನ್ ರಾಮ್, ಬಾಬಾ ಸಾಹೇಬ್ ಅಂಬೇಡ್ಕರ್, ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.**

ಪ್ರಜಾಪ್ರಭುತ್ವ ದಿನದ ರಾಯಬಾರಿ ಹರೇಕಳ ಹಾಜಬ್ಬ, ಪೌರ ಕಾರ್ಮಿಕರಾದ ನಾಗಲಕ್ಷ್ಮೀ, ಮಂಜುಳಾ ಹಾಗೂ ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದ, ಪ್ರಿಯಾಂಕಾ ಮತ್ತು ಇಬ್ಬರು ವಿಶೇ ’ ಚೇತನ ವಿದ್ಯಾರ್ಥಿಗಳು, ವಿಶೇಷ ಆಹ್ವಾನಿತರಾಗಿ, ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಪ್ರಧಾನ ಕಾರ್ಯಕ್ರಮದಲ್ಲಿ, ಭಾಗಿಯಾಗಿದ್ದರು.

ಸಮಾಜ ಕಲ್ಯಾಣ ಇಲಾಖೆಯ ನೇತೃತ್ವದಲ್ಲಿ ಹಾಗೂ ಇತರೆ ಇಲಾಖೆಗಳ ಸಹಯೋಗದಲ್ಲಿ ಆಯೋಜಿತ, ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ, ವಿಶ್ವ ದಾಖಲೆಯ ಮಾನವ ಸರಪಳಿ ಕಾರ್ಯಕ್ರಮ, ಬೀದರ್ ಜಿಲ್ಲೆಯ ಬಸವ ಕಲ್ಯಾಣದಿಂದ ಚಾಮರಾಜನಗರದ ವರೆಗೆ, ಸುಮಾರು ಎರಡೂವರೆ ಸಾವಿರ ಕಿಲೋ ಮೀಟರ್ ಉದ್ದ ನಿರ್ಮಾಣಗೊಂಡು, ಗಮನ ಸೆಳೆಯಿತು.

<><><>

ಧಾರವಾಡ ಜಿಲ್ಲೆಯಲ್ಲಿ ಮೂರುವರೆ ಲಕ್ಷ ಜನ, ಆನ್ ಲೈನ್ ಮೂಲಕ, ಪ್ರಜಾಪ್ರಭುತ್ವ ದಿನಾಚರಣೆಯ ಮಾನವ ಸರಪಳಿಯಲ್ಲಿ ಪಾಲ್ಗೊಳ್ಳಲು ಹೆಸರು ನೋಂದಾಯಿಸಿದ್ದು, ಇಡೀ ರಾಜ್ಯದಲ್ಲೇ ಜಿಲ್ಲೆಗೆ ಮೊದಲ ಸ್ಥಾನ ಲಭಿಸಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್, ಪ್ರಕಟಿಸಿದ್ದಾರೆ. ಧಾರವಾಡದ ಕರ್ನಾಟಕ ಕಾಲೇಜು ಮೈದಾನದಲ್ಲಿ ಆಯೋಜಿಸಿದ್ದ, ಪ್ರಧಾನ ಕಾರ್ಯಕ್ರಮದಲ್ಲಿ ಅವರು ಪಾಲ್ಗೊಂಡು, ಮಾತನಾಡಿದರು.

ಚಿತ್ರದುರ್ಗ ಜಿಲ್ಲೆ, ಹಿರಿಯೂರಿನಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ಅಂಬೇಡ್ಕರ್ ಪುತ್ಥಳಿಗೆ ಪುಷ್ಪ ನಮನ ಸಲ್ಲಿಸಿ, ಮಾನವ ಸರಪಳಿಯಲ್ಲಿ ಪಾಲ್ಗೊಂಡರು.

ಚಿತ್ರದುರ್ಗ ಜಿಲ್ಲೆಯ, ಮೊಳಕಾಲ್ಮೂರು ತಾಲೂಕಿನ ಮೇಲಿಕ ಕಣಿವೆ ಗ್ರಾಮದಿಂದ, ಚಳ್ಳಕೆರೆ ಮಾರ್ಗವಾಗಿ, ಹಿರಿಯೂರಿನ ಜವಗೊಂಡನಹಳ್ಳಿ ಗ್ರಾಮದ ವರೆಗೂ, ರಾಜ್ಯದಲ್ಲಿಯೇ ಅತೀ ಉದ್ದದ, 145 ಕಿಲೋ ಮೀಟರ್ ಮಾನವ ಸರಪಳಿಯನ್ನು, ಒಂದೂವರೆ ಲಕ್ಷ ಜನ ಪಾಲ್ಗೊಂಡು, ಸಂವಿಧಾನ ಪೀಠಿಕೆ ಓದಿ, ರಾಷ್ಟ್ರಗೀತೆ ಹಾಡಿದ್ದು ವಿಶೇಷ ಎಂದು, ಜಿಲ್ಲಾಧಿಕಾರಿ ಟಿ. ವೆಂಕಟೇಶ ಮಾಹಿತಿ ನೀಡಿದರು.

<><><>

ಜಿಲ್ಲಾಧಿಕಾರಿ ಟಿ. ವೆಂಕಟೇಶ ಧ್ವನಿ 24 ಸೆಕೆಂದುಗಳು

<><><>

ರಾಯಚೂರು ಜಿಲ್ಲೆಯ, ದೇವದುರ್ಗ ತಾಲೂಕಿನ ಗೂಗಲ್ ನಿಂದ, ಲಿಂಗಸೂಗೂರು ತಾಲೂಕಿನ ರೋಡಲ ಬಂಡಾದ ವರೆಗೆ, 16 ಗ್ರಾಮಗಳ ಮೂಲಕ 109 ಕಿಲೋ ಮೀಟರ್ ಉದ್ದದ ಮಾನವ ಸರಪಳಿಯನ್ನು ನಿರ್ಮಿಸಿ, ಪ್ರಜಾಪ್ರಭುತ್ವ ದಿನಾಚರಣೆ ಆಚರಿಸಲಾಯಿತು.

<><><>

ಬಳ್ಳಾರಿ ಜಿಲ್ಲೆಯಲ್ಲಿ 46 ಕಿಲೋ ಮೀಟರ್ ಉದ್ದದ ಮಾನವ ಸರಪಳಿ ರಚಿಸಲಾಗಿತ್ತು. ಸಂಡೂರು ತಾಲೂಕಿನ ಕುರೆಕುಪ್ಪ ದಿಂದ, ಚಿತ್ರದುರ್ಗ ಜಿಲ್ಲೆಯ ಮೇಲಿನ ಕಣವೆ ಗ್ರಾಮದ ವರೆಗೆ, 35 ಸಾವಿರಕ್ಕೂ ಹೆಚ್ಚು ಜನ, 20 ಸಾವಿರ ಶಾಲಾ ಮಕ್ಕಳು ಸೇರಿದಂತೆ ಮಾನವ ಸರಪಳಿಯಲ್ಲಿ ಭಾಗಿಯಾಗಿದ್ದರು. 2 ಕಿಲೋ ಮೀಟರ್ ಉದ್ದದ ರಾಷ್ಟ್ರಧ್ವಜ ಮಾದರಿ ಪ್ರದರ್ಶಿಸಿದ್ದು ವಿಶೇ ’ವಾಗಿತ್ತು. ಎರಡು ಸಾವಿರ ಸಸಿಗಳನ್ನು ಈ ಸಂದರ್ಭದಲ್ಲಿ ನೆಡಲಾಯ್ತು.

ಎಲ್ಲರಿಗೂ ಸಮಾನ ಸ್ಥಾನಮಾನ ಹಾಗೂ ಅವಕಾಶಕ್ಕಾಗಿ ಪ್ರಜಾಪ್ರಭುತ್ವ ಅಡಿಪಾಯವಾಗಿದೆ ಎಂದು, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಖಾತೆ ಸಚಿವ ಎಚ್.ಕೆ. ಪಾಟೀಲ ಹೇಳಿದ್ದಾರೆ. ಗದಗ ಜಿಲ್ಲೆ, ಮುಂಡರಗಿಯಲ್ಲಿ 'ಪ್ರಜಾಪ್ರಭುತ್ವ ದಿನಾಚರಣೆ ಹಿನ್ನೆಲೆ' ಜರುಗಿದ, ಮಾನವ ಸರಪಳಿ ಕಾರ್ಯಕ್ರಮ ಉದ್ಘಾಟಿಸಿ, ಅವರು ಮಾತನಾಡಿದರು.

<><><>

ಸಚಿವ ಎಚ್.ಕೆ. ಪಾಟೀಲ ಧ್ವನಿ 50 ಸೆಕೆಂದುಗಳು

<><><>

ಬೆಳಗಾವಿ ಜಿಲ್ಲೆಯಲ್ಲಿ ರಾಮದುರ್ಗ ತಾಲೂಕಿನ ಸಾಲಹಳ್ಳಿಯಿಂದ, ಕಿತ್ತೂರ ತಾಲೂಕಿನ ತೇಗೂರ ಗ್ರಾಮದ ವರೆಗೆ, 145 ಕಿಲೋ ಮೀಟರ್ ಉದ್ದದ ಮಾನವ ಸರಪಳಿಯನ್ನು ನಿರ್ಮಿಸಲು, ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ, ಸುವರ್ಣ ವಿಧಾನಸೌಧದ ಎದುರು ಸಂವಿಧಾನ ಪೀಠಿಕೆಗೆ ಪುಷ್ಪ ನಮನ ಸಲ್ಲಿಸಿ, ಚಾಲನೆ ನೀಡಿದರು.

ದಕ್ಷಿಣಕನ್ನಡ ಜಿಲ್ಲೆಯಲ್ಲಿ, ಹೆಜಮಾಡಿ ಸುಂಕದ ಕಟ್ಟೆಯಿಂದ, ಸುಳ್ಯದ ಸಂಪಾಜೆ ದ್ವಾರದ ವರೆಗೆ, 130 ಕಿಲೋ ಮೀಟರ್ ಉದ್ದದ ಮಾನವ ಸರಪಳಿಯಲ್ಲಿ, ಒಂದು ಲಕ್ಷಕ್ಕೂ ಹೆಚ್ಚು ಜನ, ಸಂವಿಧಾನ ಪೀಠಿಕೆಯ ಪ್ರಮಾಣ ಸ್ವೀಕರಿಸಿ, ದೇಶದ ಸಮಗ್ರತೆ ಮತ್ತು ಏಕತೆಯನ್ನು ಸಾರಿದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ರಾಜ್ಯದಲ್ಲಿ ಇದೇ ಮೊದಲ ಬಾರಿಗೆ, ಸಿಂಹ ಬಾಲದ ಸಿಂಗಳೀಕಗಳ ಸಂತಾನೋತ್ಪತ್ತಿ ಯೋಜನೆ ಯಶಸ್ವಿಯಾಗಿದೆ.

ಮೈಸೂರಿನ ಕೂರ್ಗಳ್ಳಿಯ ವನ್ಯಜೀವಿ ಪುನರ್ವಸತಿ ಕೇಂದ್ರದಲ್ಲಿ, ಅಳಿವಿನಂಚಿನ 'ಲಾಯನ್ ಟೇಲ್ಡ್ ಮೆಕಾಕ್' ಸಿಂಗಳೀಕಗಳ ಎರಡು ಮರಿಗಳು ಜನಿಸಿದ್ದು, ಅವುಗಳ ಸಂಖ್ಯೆ ನಾಲ್ಕಕ್ಕೆ ಏರಿಕೆಯಾಗಿದೆ.

ಕೇಂದ್ರೀಯ ಮೃಗಾಲಯ ಪ್ರಾಧಿಕಾರದ, ತಳಿ ಅಭಿವೃದ್ಧಿ ಯೋಜನೆಯಡಿ, ಕಳೆದ 2015 ರಿಂದ ಸಿಂಗಳೀಕಗಳ ತಳಿ ಸಂರಕ್ಷಣೆ ಮತ್ತು ಅಭಿವೃದ್ಧಿಗೆ ನಿರಂತರ ಪ್ರಯತ್ನ ನಡೆಯುತ್ತ ಬಂದಿದೆ.

ಜೀವಿವೈವಿಧ್ಯದ ಸಮತೋಲನ ಕಾಯ್ದುಕೊಳ್ಳಲು, ಅಳಿವಿನಂಚಿನ ಪ್ರಾಣಿಗಳ ಸಂರಕ್ಷಣೆಗಾಗಿ ಮೃಗಾಲಯಗಳಲ್ಲಿ ತಳಿ ಅಭಿವೃದ್ಧಿ ಕಾರ್ಯಕ್ರಮ ರೂಪಿಸಿ, ಕಾಡಿಗೆ ಬಿಡುವ ಯೋಜನೆ ಇದಾಗಿದೆ.

"ಸಿಂಗಳೀಕ ಮಾತ್ರವಲ್ಲದೇ, ತೋಳ, ಕಾಡೆಮ್ಮೆ, ಸೀಳುನಾಯಿ ತಳಿಗಳ ಅಭಿವೃದ್ಧಿ ಕಾರ್ಯ, ಕಳೆದ 9 ವರ್ಷಗಳಿಂದ ನಡೆಯುತ್ತಿದೆ. ನೀಲಗಿರಿ ಲಂಗೂರ್, ಮಲಬಾರ್ ಅಳಿಲು, ಬೂದು ಕಾಡುಕೋಳಿ ಪ್ರಭೇದ ಅಭಿವೃದ್ಧಿ ಯೋಜನೆ ಜಾರಿಯಲ್ಲಿದೆ" ಎಂದು, ಶ್ರೀ ಚಾಮರಾಜೇಂದ್ರ ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಡಿ. ಮಹೇಶ್ ಕುಮಾರ್ ತಿಳಿಸಿದ್ದಾರೆ.

ಸಿಂಗಳೀಕ ವಿನಾಶದಂಚಿನಲ್ಲಿದ್ದು, ಅಂತಾರಾಷ್ಟ್ರೀಯ ಪರಿಸರ ಸಂರಕ್ಷಣಾ ಒಕ್ಕೂಟವು – ಐ.ಯು.ಸಿ.ಎನ್. ಕೆಂಪು ಪಟ್ಟಿಗೆ ಸೇರಿಸಿದೆ. ಪಶ್ಚಿಮಘಟ್ಟದ ಕನ್ಯಾಕುಮಾರಿ ಅಗಸ್ತ್ಯಮಲೈ ದಿಂದ, ಉತ್ತರಕನ್ನಡ ಜಿಲ್ಲೆಯ ಶರಾವತಿ, ಅಘನಾಶಿನಿ ನದಿ ಕಣಿವೆ ವರೆಗೆ, ಸಿಂಗಳೀಕಗಳ ಆವಾಸ ಸ್ಥಾನಗಳಿವೆ.

<><><>

ನಾಳೆಯಿಂದ ಅಕ್ಟೋಬರ್ 2ರ ಗಾಂಧಿ ಜಯಂತಿ ವರೆಗೆ, ಸ್ವಚ್ಛತಾ ಹೀ ಸೇವಾ ಪಾಕ್ಷಿಕ ರಾಜ್ಯಾದ್ಯಂತ ಜರುಗಲಿದೆ.

ಪ್ರಸಕ್ತ ಸಾಲಿನ ಘೋಷ ವಾಕ್ಯ “ಸ್ವಭಾವ–ಸ್ವಚ್ಛತಾ, ಸಂಸ್ಕಾರ–ಸ್ವಚ್ಛತಾ” ಎಂದು, ಹಾವೇರಿ ಜಿಲ್ಲಾ ಪಂಚಾಯ್ತಿ ಸಿ.ಇ.ಓ. ಅಕ್ಷಯ್ ಶ್ರೀಧರ್ ತಿಳಿಸಿದ್ದಾರೆ.

ಗ್ರಾಮ ಮತ್ತು ನಗರಗಳಲ್ಲಿ ಸ್ವಚ್ಛತಾ ಜನಾಂದೋಲನ ಕೈಗೊಂಡು, ಸಂಪೂರ್ಣ ಕಸ ಮುಕ್ತವಾಗಿಸಲು, ವಿವಿಧ ಜನ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಸ್ವಚ್ಛ ಭಾರತ ಅಭಿಯಾನದ 10ನೇ ವಾರ್ಷಿಕೋತ್ಸವವನ್ನು, ಸ್ವಚ್ಛತಾ ಕಿ ಭಾಗೀದಾರ, ಸಂಪೂರ್ಣ ಸ್ವಚ್ಛತಾ ಚಟುವಟಿಕೆ ಹಾಗೂ ಸಫಾಯಿ ಮಿತ್ರ ಸುರಕ್ಷಾ ಎಂಬ, ಮೂರು ವಿ ’ಯಗಳನ್ನು ಕೇಂದ್ರೀಕರಿಸಿ, 2024ನೇ ಸಾಲಿನ ಸ್ವಚ್ಛತೆಯೇ ಸೇವೆ ಪಾಕ್ಷಿಕ ಆಂದೋಲನವನ್ನು ಆಚರಿಸಲಾಗುತ್ತಿದೆ.

ಸ್ವಚ್ಛ ಭಾರತ ಅಭಿಯಾನ ಯೋಜನೆಯ, ದಶಕದ ಸಾಧನೆಯ ಮೈಲುಗಲ್ಲನ್ನು ಗೌರವಿಸಲು, ಸಾರ್ವಜನಿಕ ಸಹಭಾಗಿತ್ವ ಮತ್ತು ಸಮುದಾಯದ ಭಾಗವಹಿಸುವಿಕೆ ಖಾತ್ರಿ ಪಡಿಸಲು ಜಿಲ್ಲಾಡಳಿತಗಳು, ತಾಲೂಕು ಆಡಳಿತಗಳ ಸಹಕಾರದಲ್ಲಿ ಯೋಜನೆ ರೂಪಿಸಿವೆ.

<><><>

ಕರ್ನಾಟಕ ನಾಟಕ ಅಕಾದೆಮಿ ಹಾಗೂ ಕೋಲಾರದ ಆದಿಮ ಸಾಂಸ್ಕೃತಿಕ ಕೇಂದ್ರದ ಸಹಯೋಗದಲ್ಲಿ, ಕವಿ ಡಾಕ್ಟರ್ ಸಿದ್ಧಲಿಂಗಯ್ಯ ಅವರ ನೆನಪಿನಲ್ಲಿ, ಕೋಲಾರದ ಆದಿಮ ಸಾಂಸ್ಕೃತಿಕ ಕೇಂದ್ರದಲ್ಲಿ, ಇಂದಿನಿಂದ ಮೂರು ದಿನಗಳ ಕಾಲ, ‘ನೆಲ ಸಂಸ್ಕೃತಿ ನಾಟಕೋತ್ಸವ’ ಆಯೋಜಿಸಲಾಗಿದೆ ಎಂದು, ರಾಜ್ಯ ನಾಟಕ ಅಕಾದೆಮಿ ಸದಸ್ಯ ರವೀಂದ್ರನಾಥ್ ಸಿರಿವರ ತಿಳಿಸಿದ್ದಾರೆ.

ಕೋಲಾರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆದಿಮದ ಕುಮಾರಿ ಅಂಜುಲ ಕೋಟಿಗಾನಹಳ್ಳಿ ಮತ್ತು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕವಿ, ಲಕ್ಷ್ಮೀಪತಿ ಕೋಲಾರ ಅವರಿಗೆ, ಗದ್ದುಗೆ ಗೌರವ ನೀಡಲಾಗುವುದು ಎಂದರು.

<><><>

ಡಿ.ವಿ.ಜಿ. ಬಳಗ ಪ್ರತಿಷ್ಠಾನ, ಲೇಖಕ ಸತ್ಯೇಶ್ ಬೆಳ್ಳೂರು ಅವರಿಗೆ ಪ್ರಸಕ್ತ ಸಾಲಿನ ಡಿ.ವಿ.ಜಿ. ಪ್ರಶಸ್ತಿಯನ್ನು, ಶಿಕ್ಷಣ ತಜ್ಞ ಗುರುರಾಜ್ ಕರ್ಜಗಿ, ಕವಿ ಕೆ.ಸಿ.ಶಿವಪ್ಪ, ಸಿ.ಕನಕರಾಜು ಪ್ರದಾನ ಮಾಡಿದರು.

ಮೈಸೂರಿನ ಶಾರದಾ ವಿಲಾಸ್ ಶತಮಾನೋತ್ಸವ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ, ಅನಿತಾ ಬೆಳ್ಳೂರು ಸೇರಿದಂತೆ ಗಣ್ಯರು ಪಾಲ್ಗೊಂಡಿದ್ದರು.

<><><>

ಲೇಖಕಿ ಮನೋರಮಾ ಭಟ್ ನಿನ್ನೆ ಮಂಗಳೂರಿನಲ್ಲಿ ನಿಧನರಾದರು.

ಅವರಿಗೆ 92 ವರ್ಷ ವಯಸ್ಸಾಗಿತ್ತು. ಆಕಾಶವಾಣಿ ಕಲಾವಿದೆ, ಅಂಕಣಕಾರ್ತಿ ಹಾಗೂ ರಂಗ ಕಲಾವಿದೆಯಾಗಿದ್ದ ಮನೋರಮಾ ಅವರು ಅನೇಕ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

ಅವರು, ದಿವಂಗತ ಪಂಡಿತ ಮುಳಿಯ ತಿಮ್ಮಪ್ಪಯ್ಯ ಅವರ ಸೊಸೆ. ಹೆಣ್ಣು ಮಕ್ಕಳ ಹಕ್ಕುಗಳ ಬಗ್ಗೆ ಸದೈವ ಹೋರಾಡಿದವರು ಎಂದು ಗಣ್ಯರು ಕಂಬನಿ ಮಿಡಿದಿದ್ದಾರೆ.

<><><>

ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಆಯೋಜಿತ, ಕರ್ನಾಟಕ ರಾಜ್ಯ ಅಂತರ್ ಜಿಲ್ಲಾ ಜ್ಯೂನಿಯರ್ ಮತ್ತು 23 ವರ್ಷದ ಒಳಗಿನವರ ಅಥ್ಲೆಟಿಕ್ಸ್‌ನ 2ನೇ ದಿನವಾದ ನಿನ್ನೆ, 5 ಕೂಟ ದಾಖಲೆಗಳು ನಿರ್ಮಾಣಗೊಂಡಿವೆ.

ಶಿವಮೊಗ್ಗದ ಸುದೀಪ್ ಎತ್ತರ ಜಿಗಿತದಲ್ಲಿ ಪ್ರಥಮ, ಜಾವೆಲಿನ್ ಥ್ರೋನಲ್ಲಿ ಬೆಳಗಾವಿಯ ಶಶಾಂಕ್ ಪಾಟೀಲ್, 200 ಮೀಟರ್ಸ್ ಓಟದಲ್ಲಿ ಧಾರವಾಡದ ಪ್ರಸನ್ನಕುಮಾರ ಮಣ್ಣೂರು ಪ್ರಥಮ ಸ್ಥಾನ ಗಳಿಸಿದರು.

18 ವರ್ಷದೊಳಗಿನವರ ಬಾಲಕರ ವಿಭಾಗದಲ್ಲಿ ಚಿಕ್ಕಮಗಳೂರಿನ ಎಚ್.ಡಿ.ಪ್ರಥಮ ಸಾವಿರ ಮೀಟರ್ ಓಟದಲ್ಲಿ ಪ್ರಥಮ ಸ್ಥಾನ ಹಾಗೂ 16 ವರ್ಷದ ಒಳಗಿನವರ 80 ಮೀಟರ್ ಹರ್ಡಲ್ಸ್‌ನಲ್ಲಿ ಬೆಂಗಳೂರಿನ ನೂಪುರ ಹೊಳ್ಳ ಪ್ರಥಮ ಸ್ಥಾನ ಗಳಿಸಿದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

ವಿಶ್ವ ವಿಖ್ಯಾತ ಇಂಜಿನಿಯರ್, ಭಾರತರತ್ನ ಸರ್.ಎಂ.ವಿಶ್ವೇಶ್ವರಾಯ ಅವರ 164ನೇ ಜನ್ಮ ದಿನದ ಹಿನ್ನೆಲೆ, ಅಭಿಯಂತರರ ದಿನವನ್ನು, ನಿನ್ನೆ ದೇಶಾದ್ಯಂತ ಆಚರಿಸಲಾಯಿತು.

ಕಲಬುರಗಿಯಲ್ಲಿ ನಾಳೆ, ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ, ರಾಜ್ಯ ಸಚಿವ ಸಂಪುಟ ಸಭೆ ಜರುಗಲಿದೆ. ಕಲಬುರಗಿ ಮಿನಿ ವಿಧಾನಸೌಧದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ, ಸಹಾಯವಾಣಿ ಕೇಂದ್ರ ಕಾರ್ಯಾರಂಭಿಸಿದೆ.

ಮಾಜಿ ಪ್ರಧಾನಮಂತ್ರಿ ಇಂದಿರಾ ಗಾಂಧಿ, ಬೆಂಗಳೂರಿನಲ್ಲಿ ಮಹಿಳಾ ಕಾಂಗ್ರೆಸ್ ಸ್ಥಾಪಿಸಿ, ನಿನ್ನೆಗೆ 40 ವ ರ್ ಪೂರ್ಣಗೊಂಡವು. ಮಹಿಳಾ ಕಾಂಗ್ರೆಸ್ ಇಂದಿನಿಂದ ಸದಸ್ಯತ್ವ ನೋಂದಣಿ ಅಭಿಯಾನ ಪ್ರಾರಂಭಿಸಲಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

- **ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನ; ಪ್ರಜಾಪ್ರಭುತ್ವದಿಂದ ಸಾಮಾಜಿಕ ನ್ಯಾಯ – ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದನೆ.**
- **ಧಾರವಾಡದಿಂದ ಮೂರೂವರೆ ಲಕ್ಷ ಜನ, ಮಾನವ ಸರಪಳಿಗೆ ನೋಂದಣಿ – ಸಚಿವ ಸಂತೋಷ ಲಾಡ್.**
- **ಸಿಂಗಳೀಕಗಳ ಸಂತಾನೋತ್ಪತ್ತಿ ಯೋಜನೆ, ಮೈಸೂರು ಕೂರ್ಗಳ್ಳಿಯ, ವನ್ಯಜೀವಿ ಪುನರ್ವಸತಿ ಕೇಂದ್ರದಲ್ಲಿ, ಯಶಸ್ವಿ.**
- **"ಸ್ವಭಾವ–ಸ್ವಚ್ಛತಾ; ಸಂಸ್ಕಾರ–ಸ್ವಚ್ಛತಾ" ಧ್ಯೇಯದೊಂದಿಗೆ, ನಾಳೆಯಿಂದ ಸ್ವಚ್ಛತೆಯೇ ಸೇವೆ ಪಾಕ್ಷಿಕ, ಆರಂಭ.**

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>